ನಾದಿನಿ ನಡವಳಿಕೆ ಅಣ್ಣಂಗೆ ಇಷ್ಟ ಆಗ್ತಿರ್ಲಿಲ್ಲ. ಅವನ ಯಜಮಾನಿಕೆ ಇವಳಿಗೆ ಇಷ್ಟ ಆಗ್ತಿರ್ಲಿಲ್ಲ. ಎದುರು ಮಾತಾಡಿದ್ದನ್ನ ಕೇಳೇ ಗೊತ್ತಿಲ್ದಿದ್ದೋನಿಗೆ ಪಿತ್ಥ ನೆತ್ತಿಗೇರಿದ್ರೆ ಆಶ್ಚರ್ಯ ಇಲ್ಲ.'

'ನಿನ್ನಣ್ಣನ್ನ ದುರ್ಯೋಧನ ಅಂತೀಯಾ?'

'ಛೇಛೇ, ನಿನ್ನ ನಾದಿನಿ ದ್ರೌಪದೀನೂ ಅಲ್ಲ.'

ದುಃಖ, ದುಮ್ಮಾನಗಳ ಮೋಡ ಕವಿದಿದ್ದ ಮುಖದಲ್ಲಿ ಎಳೆಬಿಸಿಲು ಗೋಚರಿಸುವಂತೆ ನಕ್ಕರು ಇಬ್ಬರೂ.

'ಹೊರಡ್ತೀನಿ ಅತ್ಗೆ. ಯಾರಾರೂ ನೋಡಿದ್ರೆ ಮತ್ತೊಂದು ರಾಮಾಯಣ...'

'ರಾಮಾಯಣ, ಮಹಾಭಾರತ ಎಲ್ಲಾ ನಮ್ಮನೇಲೇ ನಡೆಯುತ್ತೇಂತ ಕಾಣುತ್ತೆ, ಅಲ್ವೇನೋ?'

'ಎಲ್ರ ಮನೇಲೂ ನಡೀತಿರುತ್ತೆ ಅತ್ಗೆ. ಕೆಲವು ಹೊರಗಿನೋರಿಗೆ ಗೊತ್ತಾಗುತ್ತೆ, ಕೆಲವು ಗೊತ್ತಾಗಲ್ಲ...'

ಇನ್ನೂ ಏನೋ ಕೇಳುವುದಿತ್ತು ಸೀತಾಲಕ್ಷ್ಮಿಗೆ. ಸಂಶಯ ಬಗೆಹರಿಸಿಕೊಳ್ಳುವುದಿತ್ತು. ಹಾಗೇ ಅದನ್ನು ಒಡಲೊಳಗೆ ಬಚ್ಚಿಟ್ಟುಕೊಂಡರೆ ಮುಂದೆ ಇಂತಹ ಅವಕಾಶ ಸಿಗುತ್ತದೆಯೋ, ಇಲ್ಲವೋ? ಮೀನಾಮೇಷ ಎಣಿಸುತ್ತಿದ್ದ ಸೀತಾಲಕ್ಷ್ಮಿ ಕೇಳಿಯೇಬಿಟ್ಟಳು,

'ಹುಯ್ಲು ಕೊಟ್ಟಿದೀರಂತೆ, ಹೌದೇನೋ?'

ಅವಾಕ್ಕಾಗಿ ನಿಂತುಬಿಟ್ಟ ವೆಂಕಟರಾಮು. 'ಯಾರು ಕಿವಿ ಕಚ್ಚಿದ್ದು ನಿಮಗೆ?' ಕೇಳಿದ.

'ಯಾರೋ, ಹಿಂಗೇ ಸುದ್ದಿ ಬಂತಪ್ಪಾ'

'ಹುಯ್ಲು ಕೊಟ್ಟಿದ್ರೆ ಈ ಮನೆ ಮೆಟ್ಲು ಹತ್ತಿದ್ನಾ? ನೀವು ಕೊಟ್ಟ ಹಾಲು ಕುಡೀತಿದ್ನಾ? ಎಲ್ಲಾ ಸುಳಂಪಳ್ಳಿ ಕತೆ...'

ಒಂದು ದೊಡ್ಡ ಭಾರವನ್ನು ತಲೆ ಮೇಲಿನಿಂದ ಇಳುಕಿದಂತಾಯ್ತು ಸೀತಾಲಕ್ಷ್ಮಿಗೆ. ಆ ನೆಮ್ಮದಿಯಲ್ಲೇ ಕೇಳಿದಳು,

'ನಿನ್ನ ಭಾವನೆಂಟ್ರು ರಚ್ಚು ಇಟ್ಗಂಡು ಓಡಾಡ್ತಿದಾರಾ? ಜನ ಏನೇನೋ ಹೇಳ್ತಾರಪ್ಪಾ...'

'ನಾಲಿಗೆಗೆ ಎಲುಬಿಲ್ಲ ಅಂತ ಗೊತ್ತಿಲ್ವಾ ಅತ್ಗೆ? ಅವರಿಗೇನು ಬೇರೆ ಕಸುಬಿಲ್ಲ ಅಂದ್ಕಂಡಿದೀರಾ? ಎಲ್ರಿಗೂ ಅವರವರ ತಾಪತ್ರಯ ಇದ್ದೇ ಇರುತ್ತೆ. ಅಣ್ಣ ಕಮಲಕ್ಕನ ಮನೆಯೋರಿಗೆ ಬುದ್ಧಿ ಕಲಿಸ್ತೀನಿ ಅಂತ ಕುಣೀತಿದ್ನಲ್ಲ, ಏನು ಮಾಡ್ದ? ಎಲ್ಲಾ ಬರೀ ಬಾಯಿಪಟಾಕಿ. ಬಿಸಿ ಆರ್ತಿದ್ದ ಹಂಗೆ ಮರೆತೇ ಹೋಗುತ್ತೆ...'

'ಅಷ್ಟೇನಾ?'

'ಅಷ್ಟೇ, ಅಷ್ಟೇ. ನೀವು ಹೆದರ್ಕಂಬೇಡಿ ಅತ್ಗೆ. ಅಂತಾದ್ದು ಏನೂ ಆಗಲ್ಲ. ಏನೇ ಆದ್ರೂ ಅವನು ನನ್ನಣ್ಣ. ನನ್ನ ಮೇಲೆ ಅವನ ಋಣ ಇದ್ದೇ ಇರುತ್ತೆ...'

'ಪುಣ್ಯಾತ್ಮ, ನಿನ್ನ ಬಾಯಿಗೆ ಸಕ್ಕರೆ ಬೀಳ್ಲಿ. ಇವರಿಗೂ ಇಂಥಾ ಒಳ್ಳೇ ಬುದ್ಧಿ ಬಂದರೆ ಸಾಕೇ ಸಾಕು...'

ಸೀತಾಲಕ್ಷ್ಮಿಯ ತಿಂಗಳಾನುಗಟ್ಟಲೆಯ ಭಯ ಭೀತಿಗಳಿಗೆ ಮದ್ದು ಅರೆದು ಬಂದಂತೆ ಹೊರಟು ಹೋದ ವೆಂಕಟರಾಮು. ಮಗನನ್ನು ತೋಳಿಂದ ಅವುಚಿ ಮಲಗಿದ ಸೀತಾಲಕ್ಷ್ಮಿಗೆ ಆ ರಾತ್ರಿ ದುಃಸ್ವಪ್ನಗಳೊಂದೂ ಕಾಡದ ಸೊಗದ ನಿದ್ದೆ. ನೆಮ್ಮದಿಯ ನಿದ್ದೆ. ಬೆಳಗಿನ ಜಾವದ ಹೊತ್ತಿಗೆ ಕಾಜಾಣವೊಂದು ಕೂ ಕೂ ಕೂ ಎಂದು ದೀರ್ಘಾಲಾಪನೆಯಿಂದ ಎಬ್ಬಿಸುವವರೆಗೆ ಒಂದೇ ನಿದ್ದೆ ಮಾಡಿದ್ದಳು ಸೀತಾಲಕ್ಷ್ಮಿ. ಮಗ್ಗುಲ ಕಂದ ಕೂಡಾ ಮೊಲೆಹಾಲಿಗೆ ಕಾತರಿಸಿ ಅವಳ ನಿದ್ದೆಗೆಡಿಸಿರಲಿಲ್ಲ ಅನ್ನುವುದು ವಿಶೇಷ.

ವೆಂಕಟರಾಮ ಮನೆಗೆ ಬಂದು ಹೋದ ವಿಷಯವನ್ನು ಶಿವರಾಮನಿಗೆ ಹೇಳುವಂತಿಲ್ಲ. ಅದು ಯಾವತ್ತಿದ್ದರೂ ತನ್ನ ಅಂತರಂಗದ ಗುಟ್ಟು. ಹೆಣ್ಣುಮಕ್ಕಳ ಬಾಯಲ್ಲಿ ಗುಟ್ಟು ನಿಲ್ಲುವುದಿಲ್ಲ ಎನ್ನುವುದೆಲ್ಲಾ ಪುರುಷಪುಂಗವರ ಊಹಾಪೋಹ. ತಮ್ಮ ಒಡಲೊಳಗೆ ಯಾರೊಂದಿಗೂ ಹಂಚಿಕೊಳ್ಳಲಾಗದ ಗುಟ್ಟುಗಳನ್ನು ಅಡಗಿಸಿಟ್ಟುಕೊಂಡ ಹೆಣ್ಣುಗಳು ಬೇಕಾದಷ್ಟಿರಬಹುದು. ಇರಲಿಲ್ಲವೇ ಕಮಲತ್ತಿಗೆ? ಜೊತೆಗಿದ್ದರೂ ಅವರ ಅಂತರಂಗ ಯಾರಿಗೂ ತಿಲ ಮಾತ್ರ ಗೊತ್ತಾಗಿರಲಿಲ್ಲ. ಹಾಗೆಂದುಕೊಳ್ಳುವಾಗ ಮತ್ತೊಂದೇನೋ ತಲೆಯೊಳಗೆ ಮಿಂಚಿ ಸೀತಾಲಕ್ಷ್ಮಿಯ ಮಂಪರು ಹಾರಿಹೋಯ್ತು. ಈ ಬೆಳಗಿನ ಜಾವವೇ ಹೀಗೆ. ಎಷ್ಟೋ ಸಂದೇಹಗಳಿಗೆ ಅರ್ಥ ಸ್ಫುರಿಸುವ, ಸಮಸ್ಯೆಗಳಿಗೆ ಉತ್ತರ ಹೊಳೆಯುವ ಸಂಧಿಕಾಲ. 'ಬಂಗಾರದ ವಿಷಯಕ್ಕೆ ಹತ್ಗಂಡಿದ್ದು ಅಲ್ವಾ?' ಎಂದು ತಾನಾಗಿ ಬಾಯಿ ಬಿಟ್ಟು ಕೇಳಬಾರದಿತ್ತು. ಅವನ ಬಾಯಿಯಿಂದ ಏನು ಬರುವುದೋ ಕಾದು ನೋಡಬೇಕಾಗಿತ್ತು. 'ಹೌದು, ಬಂಗಾರದ ವಿಷಯದಲ್ಲಿ ನನ್ನ ಗಂಡ ಮೋಸ ಮಾಡಿದರು' ಎಂದು ನಾನಾಗಿ ಬಾಯಿ ಬಿಟ್ಟು ಹೇಳಿದಂತಾಗಲಿಲ್ಲವಾ? ತನ್ನ ಬಾಯಿಂದ ಈ ಮಾತು ಬಂತು ಎಂದು ಗಂಡನಿಗೇನಾದರೂ ಗೊತ್ತಾದರೆ ರೌದ್ರಾವತಾರ ತಾಳುವುದು ಖಂಡಿತಾ. ತೆಪ್ಪಗಿರದೆ ಆ ಕ್ಷಣದ ಉದ್ವೇಗದಲ್ಲಿ ಮಾತಾಡಿಬಿಟ್ಟೆ. ಮುತ್ತು ಒಡೆದಾಗಿದೆ; ಈಗ ಅಲವತ್ತುಕೊಂಡು ಪ್ರಯೋಜನ ಏನು? ಎಂಥಾ ಪೆದ್ದಿ ಅಂದರೆ, 'ಅತ್ತೆ ಹೇಗಿದ್ದಾರೆ?' ಎಂದು ಬಾಯ್ಮಾತಿಗೆ ಕೇಳುವುದಕ್ಕೂ ಮರೆತುಬಿಟ್ಟೆ. ತಪ್ಪುಗಳನ್ನು ಲೆಕ್ಕ ಹಾಕುವುದರಿಂದ ಈಗ ಪ್ರಯೋಜನವೇನು? ಸೀತಾಲಕ್ಷ್ಮಿ ಮಗನಿಗೆ ಎಚ್ಚರವಾಗದಂತೆ ಮೆತ್ತಗೆ ಹೊದಿಕೆ ಸರಿಸಿ ಮೇಲೆದ್ದಳು.

***

ವೆಂಕಟರಾಮುವಿನ ಮನೋಗತದ ಅರಿವಾದ ಮೇಲೆ, ತನ್ನ ಭಯ ಅರ್ಥರಹಿತವೆಂದು ಕಂಡುಕೊಂಡ ಮೇಲೆ ಸೀತಾಲಕ್ಷ್ಮಿ ನೆಮ್ಮದಿಯಿಂದಿದ್ದಳು ಅನ್ನಬಹುದು. ತಾವೇನು ಲೋಕಕ್ಕಿಲ್ಲದವರಲ್ಲ, ಎಲ್ಲರ ಮನೆಯಲ್ಲೂ ನಡೆಯುವುದು ತಮ್ಮ ಮನೆಯಲ್ಲೂ ನಡೆಯಿತು. ಒಂದೇ ಮನೆಯಲ್ಲಿ ಒಟ್ಟಿಗಿದ್ದು ಕಚ್ಚಾಡುತ್ತಿರುವುದಕ್ಕಿಂತ ಬೇರೆ ಬೇರೆ ಕೂತು ನಿಶ್ಚಿಂತೆಯಿಂದಿರುವುದು ಲೇಸು ಎಂದು ಅವಳಂದುಕೊಂಡಿದ್ದರೆ ಅದು ಹಾಗೇನಾಗಲಿಲ್ಲ. ವೆಂಕಟರಾಮು ಹೊಸ ಮನೆ ಕಟ್ಟಿಸಿದ್ದು ಶಿವರಾಮನ ಎದೆಯಲ್ಲಿ ಒತ್ತುತ್ತಿದೆ ಎಂದು ಸೀತಾಲಕ್ಷ್ಮಿಗೆ ಅಂಗೈ ನೆಲ್ಲಿಯಂತೆ ಸ್ಪಷ್ಟವಾಗುವಂತಹ ಒಂದು ಕಹಿ ಘಟನೆ ನಡೆಯಿತು. ಶಿವರಾಮನ ತೋಟದ ಕಾಲ್ದಾರಿಯಲ್ಲಿ ಬಂದು, ಧರೆಯಲ್ಲಿ ಕಡಿದ ಮೆಟ್ಟಿಲು ಹತ್ತಿ, ಅವರ ಅಂಗಳ ಹಾದು ಮೇಲಿನ ರಸ್ತೆಗೆ ಸೇರಿಕೊಳ್ಳುವ ಆ ದಿಕ್ಕಿನ ಮನೆಯವರು ಶಿವರಾಮ ಕಣ್ಣಿಗೆ ಕಂಡರೆ ನಿಂತು, ಒಂದೆರಡು ಯೋಗಕ್ಷೇಮದ ಮಾತಾಡಿ ಮುಂದೆ ರಸ್ತೆ ಸೇರಿಕೊಳ್ಳುವುದು ವಾಡಿಕೆ. ಅಂಥವರೊಂದಿಗಿನ ಬಳಕೆ ಎಷ್ಟು ಗಟ್ಟಿಯಾಗಿದೆ ಎನ್ನುವುದರ ಮೇಲೆ ಮನೆಯೊಳಗೆ ಆಹ್ವಾನ. 'ಏನೇ, ಕಾಫಿ ಶಿಲ್ಕು ಏನಾರೂ ಉಂಟಾ?' ಎಂದು ಒಳಗಿರುವ ಸೀತಾಲಕ್ಷ್ಮಿಯ ಕಿವಿಗೆ ಬೀಳುವಂತೆ ಗಟ್ಟಿ ದನಿಯಲ್ಲಿ ಸುದ್ದಿ ಮುಟ್ಟಿಸುವ ವಾಡಿಕೆ. ಕಾಫಿ ಶಿಲ್ಕು ಇಲ್ಲ ಎನ್ನುವ ದಿನ ಇರುತ್ತಿತ್ತೇ? ಯಾವತ್ತೂ ಇಲ್ಲ. ಕಾಫಿ ಬಿಸಿಯಾಗಿರಬೇಕೆಂಬ ನಿಯಮ ಕೂಡಾ ಇರಲಿಲ್ಲವಲ್ಲ? ಉಗುರು ಬೆಚ್ಚಗಿದ್ದರೆ ಸೈ. ಸೀತಾಲಕ್ಷ್ಮಿ ಕಾಫಿ ಲೋಟ ಹಿಡಿದುಕೊಂಡು ಬಂದು ಒಳಬಾಗಿಲಲ್ಲಿ ನಿಂತು ಸಂಜ್ಞೆ ಮಾಡಿದರೆ ಶಿವರಾಮ ಕೂತಲ್ಲಿಂದ ಎದ್ದು ಬಂದವರಿಗೆ ಕಾಫಿ ತೆಗೆದುಕೊಂಡು ಹೋಗಿ ಕೊಡುತ್ತಿದ್ದ. ಊರುಮನೆಯ ಗಂಡಸರಾದರೂ ಅವರು ಮನೆ ಬಾಗಿಲಿಗೆ ಬಂದಾಗ ಹೆಂಗಸರು ಎದುರಿಗೆ ಕಾಣಿಸಿಕೊಳ್ಳುತ್ತಿದ್ದುದು ಅಪರೂಪ. ಮಾತಾಡುವ ಗುತ್ತಿಗೆ ವಹಿಸಿಕೊಂಡ ಮನೆ ಯಜಮಾನ ಇರುವಾಗ ಹೆಂಗಸರಿಗೇನು ಕೆಲಸ? ಹೀಗೇ ಆ ದಿನವೂ ಗಂಡ ಕೇಳಿದರೆಂದು ಕಾಫಿಲೋಟ ಹಿಡಿದು ಬಂದ ಸೀತಾಲಕ್ಷ್ಮಿ, ಬಂದವರು ಆಚೆಮನೆಯ ಕೃಷ್ಣಯ್ಯ ಎಂದು ಗೊತ್ತು ಮಾಡಿಕೊಂಡು ಒಳಗೆ ದಾಟಿದ್ದಳು. ತನ್ನ ಕೆಲಸ ಮಾಡಿಕೊಳ್ಳುತ್ತಿದ್ದಳು. ಸ್ವಲ್ಪ ಹೊತ್ತಲ್ಲೇ ಹೊರಗೆ ಜೋರು ಜೋರು ಮಾತು. ಏನಾಯ್ತು? ಎಂದು ಸೀತಾಲಕ್ಷ್ಮಿಗೆ ಗಾಬರಿ. ಮೈತುಂಬಾ ಸೆರಗು ಹೊದ್ದು ಒಳಬಾಗಿಲಲ್ಲಿ ನಿಂತು ಹಣಿಕಿದರೆ ಗಂಡ ದನಿ ಎತ್ತರಿಸಿದ್ದಾನೆ,

'ತಮಾಷಿ ಮಾಡ್ತಿದೀರೇನ್ರೀ? ನೀವು ಕೊಂಕು ಮಾತಾಡಿದ್ರೆ ಗೊತ್ತಾಗ್ದಷ್ಟು ದಡ್ಡ ಅಂದ್ಕಂಡಿದೀರಾ ನನ್ನ? ಎಲ್ಲಾ ಅರ್ಥ ಆಗುತ್ತೆ ನಂಗೆ, ತಿಳ್ಕಳಿ...'

'ತಮಾಷಿ ಎಂತ ಮಾರಾಯ್ರೇ, ಇರೋ ವಿಷಯ ಹೇಳಿದ್ನಪ್ಪಾ. ಇದ್ರಲ್ಲಿ ಸಿಟ್ಟು ಮಾಡೋಕೆ ಏನುಂಟು ಅಂತ ನಂಗಂತೂ ಗೊತ್ತಾಗ್ತಿಲ್ಲ...'

'ಗೊತ್ತಾಗ್ದಿದ್ರೆ ಬ್ಯಾಡ. ನನ್ನೆದ್ರು ಇನ್ನ್ಯಾವತ್ತೂ ಅವನ ವಿಷಯ ಎತ್ಬೇಡಿ. ಪಾಲಾಗಿ ಬೇರೆ ಕೂತಾಯ್ತು ಅಂದ್ಮೇಲೆ ಅವರಿಗೂ, ನಂಗೂ ಸಂಬಂಧ ಕಡಿದು ಹೋಯ್ತು'

'ಹಂಗಂದ್ಕೂಡ್ಲೆ ರಕ್ತಸಂಬಂಧ ಇಲ್ಲಾಂತಾಗುತ್ತಾ? ಒಂದೇ ತಾಯಿ ಹೊಟ್ಟೇಲಿ ಹುಟ್ಟಿದೋರು. ಅವನು ವಯಸ್ಸಲ್ಲಿ ನಿಮಗಿಂತ ಸಣ್ಣೋನು ಅಂದ್ಮೇಲೆ ನೀವೇ ಒಂಚೂರು ತಗ್ಗಿ ನಡೆದ್ರೆ ನೋಡೋರ ಕಣ್ಣಿಗೆ ಚಂದ...'

'ಆಯ್ತು, ಆಯ್ತು. ನಡೀರಿ ಇನ್ನು. ಯಾರ್ಯಾರದ್ದೋ ಉಪದೇಶ ಕೇಳ್ಕಂಡು ನಾನು ಬುದ್ಧಿ ಕಲೀಬೇಕಾದ್ದಿಲ್ಲ...' ನೇರವಾಗೇ ಹೇಳಿದ ಶಿವರಾಮ.

'ಹೋಗ್ತೀನಿ ಮಾರಾಯ್ರಾ, ನೀವೇ ಒಳಗೆ ಕರೆದಿದ್ದು. ಇಲ್ದಿದ್ರೆ ನಾನಾಗಿ ಬರ್ತಿರ್ಲಿಲ್ಲ. ನನ್ನ